ಸಂಯುಕ್ತ ಕರ್ನಾಟಕ
SAMYUKTA KARNATAKA
ಕನ್ನಡಿಗರ ನಾಡಿಪತ್ರಿಕೆ

# ಚಿಂತಕರ ಚಾವಡಿ ಈಗ ಗದ್ದಲದ ಗೂಡು: ಸಭಾಪತಿ ಹೊರಟ್ಟಿ ವಿಷಾದ

• ನರಸಿಂಹರಾವ್ /ಕೆ.ವಿ.ಪರಮೇಶ್

ಮುಖಾ ಮುಖಿ
ಸಂದರ್ಶನ



Bangalore Edition
Dec 9, 2023 Page No. 1
Powered by : eReleGo.com

# ಚಿಂತಕರ ಚಾವಡಿ ಈಗ ಗದ್ದಲದ ಗೂಡು: ಸಭಾಪತಿ ಹೊರಟ್ಟಿ ವಿಷಾದ

▪ ನರಸಿಂಹರಾವ್/ಕೆ.ವಿ.ಪರಮೇಶ್

**ಮುಖಾ ಮುಖಿ ಸಂದರ್ಶನ**

ಎನ್‌ಇಪಿ ವಿಷಯಕ್ಕೆ ಸಂಬಂಧಿಸಿದ ಚರ್ಚೆ ಶುಕ್ರವಾರ ವಿಧಾನಪರಿಷತ್‌ನಲ್ಲಿ ಆಡಳಿತ-ವಿಪಕ್ಷಗಳ ನಡುವೆ ಕೋಲಾಹಲಕ್ಕೆ ಕಾರಣವಾಯಿತು. ವಿಪಕ್ಷ ಸದಸ್ಯರ ಗದ್ದಲ ತಾರಕಕ್ಕೇರಿದಾಗ ಮಧ್ಯಪ್ರವೇಶಿಸಿದ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಲಾಪದ ಗೌರವ ಕಾಪಾಡುವಂತೆ ಮಾಡಿದ ಮನವಿಗೆ ಸ್ಪಂದನೆ ಸಿಗದಿದ್ದಾಗ ನಾನು ಪೀಠಕ್ಕೆ ಅಂಟಿ ಕುಳಿತಿಲ್ಲ. ನನ್ನ ಮಾತಿಗೆ ಮನ್ನಣೆ ಇಲ್ಲ ಎಂದಾದಲ್ಲಿ ರಾಜೀನಾಮೆ ಕೊಟ್ಟು ಹೋಗುತ್ತೇನೆ ಎಂದು ಅಬ್ಬರಿಸಿದ್ದರು. ಎರಡನೇ ಬಾರಿಗೆ ಹೊರಟ್ಟಿ ಅವರಿಂದ ರಾಜೀನಾಮೆ ಮಾತು ಹೊರಬಿದ್ದಿದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಕರ್ನಾಟಕ ಅವರೊಂದಿಗೆ ನಡೆಸಿದ ವಿಶೇಷ ಸಂದರ್ಶನ ಇಲ್ಲಿದೆ.

**ಪ್ರಶ್ನೆ** ರಾಜೀನಾಮೆ ಮಾತೇಕೆ? ಬೇಸರವೋ ಹತಾಶೆಯೋ?

**ಸಭಾಪತಿ:** ಬೇಸರವಾಗಿದ್ದು ಹೌದು. ನಾನು ಯಾವತ್ತೂ ಹತಾಶನಾಗಿಲ್ಲ. ಬೇಸರದಿಂದಲೇ ನಾನು ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರೂ ಈವರೆಗೆ ಯಾವೊಬ್ಬ ಸದಸ್ಯರೂ ಬಂದು ಏನು ಎಂದು ಪ್ರಶ್ನೆ ಮಾಡಿಲ್ಲ. ಸಭಾಪತಿ ಸ್ಥಾನಕ್ಕೆ ಎಲ್ಲಿದೆ ಗೌರವ? ಯಾರೂ ನಿಯಮಗಳನ್ನು ಪಾಲಿಸುತ್ತಿಲ್ಲ. ವಿನಾಕಾರಣ ಸದನದ ಸಮಯ ಹಾಳು ಮಾಡುತ್ತಾರೆ. ಕೇವಲ ಒಂದು ಪ್ರಶ್ನೆ ಇಡೀ ಸದನವನ್ನು ಹಾಳುಮಾಡಬಾರದು.



**ಪ್ರಶ್ನೆ** ಚಿಂತಕರ ಚಾವಡಿ ಎನ್ನುವ ಪರಿಷತ್ ಎತ್ತ ಸಾಗುತ್ತಿದೆ? ಏಕೆ ಹೀಗಾಗುತ್ತಿದೆ?

**ಸಭಾಪತಿ:** ಇತಿಹಾಸವಿರುವ ಮೇಲ್ಮನೆಯ ಘನತೆಗೆ ಧಕ್ಕೆ ತರುವಂತಹ ಪ್ರಯತ್ನ ಹಿರಿಯ ಸದಸ್ಯರಿಂದಲೇ ನಡೆಯುತ್ತಿರುವುದು ಉತ್ತಮ ಬೆಳವಣಿಗೆ ಅಲ್ಲ. ಸಭಾಪತಿಯವರ ಮನವಿಗೆ ಬೆಲೆಯೇ ಇಲ್ಲ ಎಂದಾದರೆ ನಾನು ಆ ಪೀಠದಲ್ಲಿ ಕುಳಿತುಕೊಳ್ಳುವುದರಲ್ಲಿ ಅರ್ಥವಿದೆಯಾ? ಇಂತಹ ಸನ್ನಿವೇಶದಲ್ಲಿ ಕಲಾಪ ಮುಂದೂಡುವುದೊಂದೇ ಮಾರ್ಗ. ಆದರೆ ಹಾಗೆ ಮಾಡಿದಲ್ಲಿ ಸರ್ಕಾರದ ಬೊಕ್ಕಸದ ಹಣ ಪೋಲಾಗುತ್ತದೆ. ಅಮೂಲ್ಯ ಸಮಯವೂ ವ್ಯರ್ಥವಾಗುತ್ತದೆ. ಜನರಿಗೆ ನ್ಯಾಯ ಕೊಡಲಾಗದು. ಆದರೆ ಹೀಗಾಗಬಾರದು.

**ಪ್ರಶ್ನೆ** ಹೊರಟ್ಟಿ ಅವರಂತಹ ಹಿರಿಯರಿಂದಲೂ ಕಲಾಪ ನಿಯಂತ್ರಣ ಸಾಧ್ಯವಾಗುತ್ತಿಲ್ಲವೇ?

**ಸಭಾಪತಿ:** ಎರಡೂ ಸದನಗಳಲ್ಲಿ ಅತ್ಯಂತ ಸೀನಿಯರ್ ನಾನು. 43 ವರ್ಷದಿಂದ ಸದನದಲ್ಲಿದ್ದೀನಿ. ಇಂತಹ ಮಹತ್ವದ ಸ್ಥಾನದಲ್ಲಿ ಕೂರುವುದು ಆಸೆಯಿಂದಲ್ಲ. ನ್ಯಾಯ ಕೊಡಲಾಗದ ಆ ಸ್ಥಾನ ಏಕೆ ಬೇಕು. ಸಭಾಪತಿ ಸ್ಥಾನದಿಂದ ಪದೇ ಪದೇ ಇಷ್ಟು ವಿನಂತಿ ಮಾಡಿಕೊಂಡರೂ ಕಿವಿಗೊಡದಿದ್ದಲ್ಲಿ ಏನು ಮಾಡುವುದು. ಬೇಸರದಿಂದ ಅನಿವಾರ್ಯವಾಗಿ ರಾಜೀನಾಮೆ ಮಾತನಾಡಿದ್ದೇನೆ. ಅವರು ಅರ್ಥಮಾಡಿಕೊಂಡರೆ ಒಳ್ಳೆಯದು.

**ಪ್ರಶ್ನೆ** ಪ್ರಶ್ನೆ: ಗದ್ದಲದ ಸಂದರ್ಭಗಳಲ್ಲಿ ಸಭಾಪತಿ ಅಸಹಾಯಕರಾಗುತ್ತಾರಾ?

**ಸಭಾಪತಿ:** ಹಾಗೇನಿಲ್ಲ. ನಿಯಮಬದ್ಧವಾಗಿ ನಾನು ಮುಂದುವರಿಯಬೇಕೆಂದರೆ ಅಂತಹ ಸದಸ್ಯರನ್ನು ಹೊರಗೆ ಹಾಕಬೇಕಷ್ಟೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆ ಕ್ರಮ ದೊಡ್ಡದಲ್ಲ. ಸದಸ್ಯರೂ ಸಹ ಇಂತಹ ಕ್ರಮಕ್ಕೆ ಅವಕಾಶವಾಗದಂತೆ ನಡೆದುಕೊಳ್ಳಬೇಕು. ಸದನದ ಗೌರವಕ್ಕೆ ಚ್ಯುತಿ ಬರದಂತೆ ವರ್ತಿಸಬೇಕು. ಸಭಾಪತಿ ಮಾತಿಗೆ ಕಿಮ್ಮತ್ತು ಸಿಗದಿದ್ದಲ್ಲಿ ಸದನವನ್ನು ಸರಿದಾರಿಗೆ ತರಲು ಕಠಿಣ ಕ್ರಮ ಜರುಗಿಸುವ ಅನಿವಾರ್ಯ ಕ್ರಮಕ್ಕೆ ಮುಂದಾಗಬೇಕಾಗುತ್ತದೆ.

**ಪ್ರಶ್ನೆ** ನಿಮ್ಮ ಪ್ರಕಾರ ಇದಕ್ಕೆಲ್ಲಾ ಮೂಲ ಕಾರಣ ಏನಿರಬಹುದು?

**ಸಭಾಪತಿ:** ಇಂತಹ ವಿದ್ಯಮಾನಗಳಿಂದಲೇ ವಿಧಾನಪರಿಸತ್ ಏಕಿರಬೇಕು ಎನ್ನುವ ಮಟ್ಟಕ್ಕೆ ಚರ್ಚೆಗಳಾಗಿವೆ. ಇದಾಗಬಾರದು ಎನ್ನುವುದನ್ನು ಸದಸ್ಯರು ತಿಳಿದುಕೊಳ್ಳಬೇಕು. ಸೋತವರಿಗೆ ಪುನರ್ವಸತಿ ಒದಗಿಸಲು ರಾಜಕೀಯ ಪಕ್ಷಗಳು ಮೇಲ್ಮನೆಯನ್ನು ಬಳಸಿಕೊಳ್ಳುತ್ತಿರುವುದು ಇಂತಹ ವಿದ್ಯಮಾನಗಳಿಗೆ ಕಾರಣ.

**ಪ್ರಶ್ನೆ** ಹಿರಿಯಣ್ಣನ ಸ್ಥಾನದಲ್ಲಿದ್ದ ಪರಿಷತ್‌ಗೆ ಈಗ ಏನಾಗಿದೆ

**ಸಭಾಪತಿ:** ಆಗ ವಿಧಾನಪರಿಷತ್ ಕಲಾಪಗಳು ಹೇಗೆ ನಡೆಯುತ್ತಿದ್ದವು ಅಂದರೆ...ಅಲ್ಲಿ ಒಂದು ಸೂಜಿಬಿದ್ದರೂ ಸಪ್ಪಳವಾಗುವಂತೆ ಇರುತ್ತಿತ್ತು. ಚಿಂತಕರ ಚಾವಡಿಯಲ್ಲಿ ಪ್ರಸ್ತಾಪವಾಗುವ ವಿಷಯಗಳು ಎಲ್ಲೆಡೆ ಚರ್ಚೆಯಾಗುತ್ತಿದ್ದವು. ಈಗ ಸದನದ ಬಗ್ಗೆ ಗೌರವವೇ ಇಲ್ಲ. ತಾವು ಏನು ಮಾತನಾಡುತ್ತಾರೆ ಎಂದು ಅವರಿಗೆ ಗೊತ್ತಾಗುವುದೇ ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ ವಿಧಾನಪರಿಷತ್ತು ಹಿರಿಯಣ್ಣನ ಸ್ಥಾನದಲ್ಲಿದೆ. ಮಾರ್ಗದರ್ಶನ ಮಾಡುವುದು ಈ ಮನೆಯ ಕರ್ತವ್ಯವೂ ಹೌದು. ಆದರೆ ಈಗ ಏನಾಗುತ್ತಿದೆ? ನಿಜಕ್ಕೂ ನನಗೆ ಬೇಸರವಾಗುತ್ತಿದೆ.

**ಪ್ರಶ್ನೆ** ಆಯ್ಕೆಯಾಗುವ ಸದಸ್ಯರ ಗುಣಮಟ್ಟದ ಬಗ್ಗೆ ಏನಂತೀರಿ?

**ಸಭಾಪತಿ:** ಆಗಿನ ಸಂದರ್ಭದಲ್ಲಿ ಎಚ್.ನರಸಿಂಹಯ್ಯ, ಖಾದ್ರಿ ಶಾಮಣ್ಣ, ಜಯಮ್ಮ, ಆರತಿ, ಮಲ್ಲಿಕಾರ್ಜುನ ಮನ್ಸೂರ್ ಹೀಗೆ ಕಲಾವಿದರು, ಚಿಂತಕರು, ಸಾಹಿತಿಗಳು ಇರುತ್ತಿದ್ದರು. ಈಗ ನೋಡಿದರೆ ಚುನಾವಣೆಯಲ್ಲಿ ಸೋತರವನ್ನು, ಮೇಲ್ಮನೆಗೆ ನಾಮಕರಣ ಮಾಡುವ ಮೂಲಕ ಪುನರ್ವಸತಿ ಕೇಂದ್ರದಂತೆ ಆಗುತ್ತಿದೆ. ಮೇಲ್ಮನೆಯ ಮೌಲ್ಯಗಳು ಕುಸಿಯುತ್ತಿವೆ. ಇನ್ನು ಮುಂದೆಯಾದರೂ ಮೌಲ್ಯಗಳನ್ನು ಎತ್ತಿಹಿಡಿಯುವಂತಹ ವ್ಯಕ್ತಿಗಳು ಮೇಲ್ಮನೆ ಪ್ರವೇಶಿಸಲಿ ಎಂದು ಬಯಸುವೆ.